ಶ್ರೀ ಆರ್. ಮುನಿಶ್ಯಾಮಯ್ಯ.—ಈ ಎಸ್ಟಿಮೇಟ್ ತಯಾರಾಗಿ ಎಷ್ಟು ದಿನಗಳಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಫೆಬ್ರವರಿ ತಿಂಗಳಲ್ಲಿ ಮಾಡಲಾಯಿತು.

ಶ್ರೀ ಆರ್. ಮುನಿಸ್ವಾಮಯ್ಯ.—ಇದರಲ್ಲಿ ಬಾವಿಗಳಿಗೆಷ್ಟು ಹಣ ಖರ್ಚಾಗುತ್ತದೆಂದು ಹೇಳಿದ್ದಾರೆ, ಕೊಳವಾಯಿಗಳಿಗೆಷ್ಟು ಖರ್ಚಾಗುತ್ತದೆಂದು ಹೇಳಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರ ಈಗ ನನ್ನಲ್ಲಿಲ್ಲ. ಫೆಬ್ರವರಿ ತಿಂಗಳಲ್ಲಿ ತಾನೇ ಡೆಪ್ಯುಟಿ ಕಮಿಷನರು ಎಸ್ಟಿಮೇಟ್ ಕಳುಹಿಸಿದ್ದಾರೆ.

ಶ್ರೀ ಆರ್. ಮುನಿಶ್ಯಾಮಯ್ಯ.—ಎಷ್ಟು ಬಾವಿಗಳನ್ನು ತೋಡಿಸುತ್ತಾರೆಂಬುದನ್ನು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟಿನ ವಿವರಗಳು ನನ್ನ ಹತ್ತಿರ ಇಲ್ಲ.

Bidarahalli Reservoir across Kapini.

Q.—454. Sri. H. K. SHIVARUDRAPPA (Gundlupet—Heggaddevankote).—

Will the Government be pleased to state :—

(*a*) the names of villages, survey numbers and the total area of land that will be submerged by the proposed construction of an anicut near Bidarahalli in Heggaddevankote Taluk ;

(*b*) the relief that has been afforded by Government to the people that will be affected adversely by such submersion ; if so, the details may be given ;

(*c*) the survey numbers and their total extent that will come under wet cultivation in that taluk by the construction of the said anicut (villagewar) ;

(*d*) the amount spent on this work during the year 1952-53 ;

(*e*) the stage at which this work is at present ?

A.—Sri KADIDAL MANJAPPA (Minister for Revenue and Public Works).—

(*a*) There is no proposal for the construction of an Anicut. Bidarahally is the site of the proposed Reservoir across the Kapini river. A statement showing the details is appended below

(*b*) Only the preliminary survey works are in progress and hence the question does not arise now.

(*c*) The villagewar atchkats are not yet finalised. About 6,000 acres will be irrigated.

(d) A sum of Rs. 19,978 has been spent up to end of January 1953 on survey charges and establishment.

(*e*) The construction work is not yet taken up as the final surveys are going on.

(SRI KADIDAL MANJAPPA.)

The names of villages and extent of lands that are submerged under Kabbini Reservoir Dam of the several villages are given below :—

Sl. No.	*Names of villages*	*Extent of submersion*									
		Kharab		*Wet*		*Dry*		*Garden*		*Total*	
	LEFT BANK.										
		A.	G.	A.	G.	A.	G.	A.	G.	A.	G.
*1	Beechanahally	15	19	8	7	284	17	0	20	308	23
2	Nerale	6	15	31	21	47	29	..		85	25
*3	Giyara	44	26	10	3	369	16	1	5	425	10
4	Machare	93	12	92	12	332	0	..		517	24
*5	Hosaholalu	0	8	41	19	259	13	..		301	0
*6	Sogahalli	3	20	8	11	365	36	0	9	367	36
7	Badanakuppe	32	2	10	28	144	29	..		187	19
8	Honnur Kuppe	65	35	..		64	32	..		130	27
9	Manchegowdanahalli ..	25	4	..		8	28	..		33	32
*10	Sondipura or Krishnarajapura ..	9	23	5	18	205	5	0	16	220	32
*11	Belthur	19	9	50	28	225	4	0	2	297	3
*12	Nisha	37	9	64	38	302	24	..		404	31
13	Karapura	23	0	..		124	15	..		147	15
14	Gudathur	2	28	21	34	195	24	..		220	6
	Forest area	578	0	..		..		..		579	0
	RIGHT BANK.										
15	Birarahally	29	37	48	34	82	9	..		161	0
16	Uyyambally	..		..		226	37	..		226	37
*17	Kittur	61	8	107	39	652	4	..		821	11
*18	Singapatna	64	32	26	6	235	39	..		326	37
19	Jayaganakote	51	25	..		33	15	..		85	0
*20	Malali	38	6	83	36	548	14	..		670	16
*21	Magge	39	12	98	18	559	1	..		690	31
*22	Kanakanahally	18	16	5	26	82	34	0	10	107	6
*23	Begur	37	37	16	31	182	18	..		237	6
24	Beerambally	4	0	45	0	187	37	..		237	5
*25	Hosahally	19	13	6	24	151	39	..		177	36
26	Gandathur	60	16	..		134	28	..		195	4
	Total ..	1,381	12	779	1	5,997	27	2	28	8,160	22

*Denotes villages coming under submersion. (No. of villages submerged—14.)

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ರಿಸರ್ವಾಯರ್ ಕಟ್ಟುವುದರಿಂದ ಹೆಗ್ಗಡದೇವನಕೋಟೆಗೆ ಅನುಕೂಲವಾಗುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನ್ಯಲ್ಪಮಟ್ಟಿಗೆ ಅನುಕೂಲವಾಗುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ —8,000 ಎಕರೆಗಳು ಮುಳುಗಡೆಯಾಗುತ್ತವೆಂದು ಹೇಳಿದ್ದೀರಿ; 6,000 ಎಕರೆಗಳು ಸಾಗುವಳಿಯಾಗುತ್ತವೆಂದು ಹೇಳಿದ್ದೀರಿ. ಅಂದಮೇಲೆ ಹೇಗೆ ಅನುಕೂಲವಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—6,000 ಎಕರೆಗಳು ಜನರಿಗೆ ವ್ಯವಸಾಯಕ್ಕೆ ಸಿಕ್ಕಿದಂತಾಗುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆದರೆ 8,000 ಎಕರೆಗಳಷ್ಟು ಮುಳುಗಡೆಯಾಗುವಾಗ ಜನರಿಗೆ ಹೆಚ್ಚಿಗೆ ಆದ ಉಪಯೋಗ ಏನು?

ಶ್ರೀ ಕಡಿದಾಳ್ ಮಂಜಪ್ಪ.—ಪೂರ್ತಿ 8,000 ಎಕರೆಗಳಷ್ಟು ಜಮೀನು ಹಿಡುವಳಿಯಲ್ಲಿಲ್ಲ. ಸರ್ಕಾರಿ ಬಂಜರೂ ಇದೆ.

ಶ್ರೀ ಎಚ್. ಕೆ ಶಿವರುದ್ರಪ್ಪ.—ಈ ಸಾರಿ ಇದನ್ನು ಕಟ್ಟಿ ಮುಗಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ಸರ್ವೆಯೇ ಪೂರ್ತಿಯಾಗಿಲ್ಲ.